**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು, ಮಡಿಕೇರಿ**

**ಸ್ಪೆಷಲ್ ಕೇಸ್: 54/2019**

ಫ್ರಾಸಾ- 15

ಚಾಸಾ- 24

| | | |
|---|---|---|
| ಸಾಕ್ಷಿದಾರರ ಹೆಸರು | : | ಮಂಜುನಾಥ ಎಸ್.ವಿ |
| ತಂದೆಯ ಹೆಸರು | : | ವಿಜಯ್ ಎಸ್.ವಿ |
| ವಯಸ್ಸು | : | 31 ವರ್ಷ |
| ವೃತ್ತಿ | : | ಪಿಸಿ-94, ಕುಶಾಲನಗರ ನಗರ ಪೊಲೀಸ್ ಠಾಣೆ. |
| ವಾಸ | : | ಶನಿವಾರಸಂತೆ. |

ಸಾಕ್ಷಿಯನ್ನು ದಿನಾಂಕ **23-08-2024** ರಂದು ಕರೆಯಿಸಿ ಪ್ರಮಾಣ ವಚನ **ಭೋಧಿಸಲಾಯಿತು.**

ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ:

ನಾನು ದಿನಾಂಕ 19-07-2018 ರಿಂದ ದಿನಾಂಕ 20-07-2024 ರವರೆಗೆ ನಾನು ಸೋಮವಾರಪೇಟೆ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕೆಲಸ ಮಾಡುತಿದ್ದೆ.

ದಿನಾಂಕ 21-10-2019 ರಂದು ಚಾಸಾ-28 ರವರು ನನ್ನನ್ನು ಠಾಣೆಗೆ ಕರೆದು ಈ ಪ್ರಕರಣದಲ್ಲಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ನೀಡುವಂತೆ ಸೂಚಿಸಿದ ಮೇರೆಗೆ ನಾನು ಸದರಿ ಪ್ರಕರಣದ ಪ್ರಥಮ ವರ್ತಮಾನ ವರದಿಯನ್ನು ತೆಗೆದುಕೊಂಡು ಮಾನ್ಯ ನ್ಯಾಯಾಲಯಕ್ಕೆ ಬೆಳಿಗ್ಗೆ 11.10 ಗಂಟೆಗೆ ತಲುಪಿಸಿರುತ್ತೇನೆ. ವಾಹನ ಸೌಕರ್ಯ ಇಲ್ಲದ ಕಾರಣ ನನಗೆ ಪ್ರಥಮ ವರ್ತಮಾನ ವರದಿಯನ್ನು ತಲುಪಿಸಲು ವಿಳಂಬವಾಗಿರುತ್ತದೆ. ಈಗ ನಾನು ನೋಡುತ್ತಿರುವ ಪ್ರಥಮ ವರ್ತಮಾನ ವರದಿ ನಾನು ನೀಡಿದ ಪ್ರಥಮ ವರ್ತಮಾನ ವರದಿ ಆಗಿದ್ದು ಅದನ್ನು ನಿಪಿ-18 ಎಂದು ಗುರುತಿಸಲಾಯಿತು.

**<u>ಪಾಟೀಸವಾಲು- 1 ರಿಂದ 4 ನೇ ಆರೋಪಿತರ ಪರವಾಗಿ ಶ್ರೀ. ಎ.ಜಿ.ಜಿ. ವಕೀಲರಿಂದ:</u>**

ನಮ್ಮ ಠಾಣೆಯಿಂದ ಮಡಿಕೇರಿ ನ್ಯಾಯಾಲಯಕ್ಕೆ 45 ಕಿಲೋ ಮೀಟರ್ ದೂರ ಇದೆ. ರಾತ್ರಿ 12.45 ಕ್ಕೆ ನ್ಯಾಯಾಧೀಶರಿಗೆ ತಲುಪಿಸುವಂತೆ ಚಾಸಾ-28 ರವರು ನನಗೆ ಪಾಸ್ ಪೋರ್ಟ್ ನೀಡಿದ್ದರು. ಸೋಮವಾರಪೇಟೆ ನ್ಯಾಯಾಲಯದಲ್ಲಿ ಇಲಾಖಾ ಜೀಪು ಹಾಗೂ ಬೈಕಿನ ವ್ಯವಸ್ಥೆ ಇದೆ ಸಾಕ್ಷಿ ಮುಂದುವರೆದು ನಮಗೆ ಆ ವ್ಯವಸ್ಥೆ ಇಲ್ಲ ಎಂದು ನುಡಿಯುತ್ತಾರೆ. ಠಾಣಾ ಬೈಕನ್ನು ನಾವು ಓಡಿಸುವುದಿಲ್ಲ. ಸೋಮವಾರಪೇಟೆಯಿಂದ ಮಡಿಕೇರಿಗೆ ಮಂಗಳೂರಿಗೆ ಬರುವ ರಾತ್ರಿ ಬಸ್ಸುಗಳು ಇವೆ ಎಂದರೆ ಸರಿಯಲ್ಲ. ತನಿಖಾಧಿಕಾರಿಗಳಿಗೆ ಹೇಳಿಕೆ ನೀಡುವ ಸಂದರ್ಭದಲ್ಲಿ ವಾಹನ ಇಲ್ಲದ ಕಾರಣ ಪ್ರಥಮ ವರ್ತಮಾನ ವರದಿಯನ್ನು ವಿಳಂಬವಾಗಿ ನೀಡಿದ್ದೇನೆ ಎಂದು ಹೇಳಿಕೆ ನೀಡಿಲ್ಲ. ಉದ್ದೇಶಪೂರ್ವಕವಾಗಿ ನಾನು ಪ್ರಥಮ ವರ್ತಮಾನ ವರದಿಯನ್ನು ತಡವಾಗಿ ನೀಡಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ:</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ